# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 190

ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಕೆ ಹರಿಪ್ರಸಾದ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 01-02-2021

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೇಂದ್ರದಿಂದ ರಾಜ್ಯಕ್ಕೆ ಆಗಮಿಸಿರುವ ಕೊರೋನಾ ನಿರೋಧಕ ಲಸಿಕೆಗಳ ಸಂಖ್ಯೆ ಎಷ್ಟು; ಕೋವಿಡ್ ಲಸಿಕೆ ಅಭಿಯಾನವನ್ನು ಎಂದಿನಿಂದ ಪ್ರಾರಂಭಿಸಲಾಗಿದೆ; | ಕೇಂದ್ರದಿಂದ ರಾಜ್ಯಕ್ಕೆ ಇದುವರೆಗೂ ಆಗಮಿಸಿರುವ ಲಸಿಕೆಗಳ ಸಂಖ್ಯೆ 17,18,240 (ಹದಿನೇಳು ಲಕ್ಷದ ಹದಿನೆಂಟು ಸಾವಿರದ ಎರಡು ನೂರ ನಲವತ್ತು). ಕೋವಿಡ್ ಲಸಿಕಾ ಅಭಿಯಾನವನ್ನು ದಿನಾಂಕ 16.01.2021 ರಿಂದ ಪ್ರಾರಂಭಿಸಲಾಗಿದೆ. |
| ಆ | ಕೊರೋನಾ ನಿರೋಧಕ ಲಸಿಕೆಗಳನ್ನು ನೀಡುವಾಗ ಅನುಸರಿಸುತ್ತಿರುವ ಮಾರ್ಗಸೂಚಿಗಳೇನು; ಈ ನಿರೋಧಕ ಲಸಿಕೆಗಳನ್ನು ಪಡೆದವರಲ್ಲಿ ಸಂಭವಿಸುತ್ತಿರುವ ಅಡ್ಡಪರಿಣಾಮಗಳ ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು ? | ಕರೋನ ನಿರೋಧಕ ಲಸಿಕೆಗಳನ್ನು ನೀಡುವಾಗ ಅನುಸರಿಸುತ್ತಿರುವ ಮಾರ್ಗಸೂಚಿಯ ವಿವರವು ಈ ಕೆಳಕಂಡ ಲಿಂಕ್ ನಲ್ಲಿ ಲಭ್ಯವಿದೆ https://www.mohfw.gov.in/covid_vaccination/vaccination/dist/images/documents/COVID19VaccineOG111Chapter16.pdf<br>ಈ ನಿರೋಧಕ ಲಸಿಕೆಗಳನ್ನು ಪಡೆದವರಲ್ಲಿ ಸಂಭವಿಸುತ್ತಿರುವ ಅಡ್ಡಪರಿಣಾಮಗಳ ನಿವಾರಣೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಕೋವಿಡ್ ಲಸಿಕಾಕರಣದಿಂದ ಉಂಟಾಗಬಹುದಾದ ಸಂಭಾವ್ಯ ಅಡ್ಡಪರಿಣಾಮಗಳ ಕುರಿತು ಅರಿವು ಮೂಡಿಸಲು ತರಬೇತಿ ಪಡೆದ ಪರಿಣಿತರನ್ನೊಳಗೊಂಡ ಮಿತಿಗಳನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಸದಸ್ಯರು ಕೋವಿಡ್ ಲಸಿಕಾಕರಣದಿಂದ ಉಂಟಾಗಬಹುದಾದ ಸಂಭಾವ್ಯ ಸಣ್ಣ ಪುಟ್ಟ ಅಡ್ಡಪರಿಣಾಮಗಳು ಮತ್ತು ಅದರ ನಿವಾರಣಾ ಕ್ರಮಗಳ ಕುರಿತು ಮಾಹಿತಿ ನೀಡುತ್ತಿದ್ದಾರೆ. |

| | | |
|---|---|---|
| | | 2.ಲಸಿಕಾಕರಣದ ನಂತರ ಕಡ್ಡಾಯವಾಗಿ 30 ನಿಮಿಷಗಳ ಕಾಲ ಅವರನ್ನು ಗಮನಿಸಲಾಗುತ್ತದೆ.<br>3. ಲಸಿಕಾಕರಣ ನಡೆಸಲಾಗುವ ಸ್ಥಳಗಳಲ್ಲಿ ಯಾವುದೇ ಅಡ್ಡಪರಿಣಾಮಗಳುಂಟಾದಲ್ಲಿ ತಕ್ಷಣವೆ ಚಿಕಿತ್ಸೆ ನೀಡಲು ಅಗತ್ಯ ಪರಿಕರ ಮತ್ತು ಔಷದಿಯನ್ನೊಳಗೊಂಡ ಕಿಟ್‌ಗಳನ್ನು ಕಡ್ಡಾಯವಾಗಿ ಇರಿಸಲಾಗಿದೆ.<br>4. ಯಾವುದೇ ಅಡ್ಡಪರಿಣಾಮಗಳುಂಟಾದಲ್ಲಿ ತಕ್ಷಣವೇ ಅದನ್ನು ನಿರ್ವಹಿಸಲು ಲಸಿಕೆ ನೀಡುವ ಶುಶ್ರೂಷಕರಿಗೆ ಮತ್ತು ವೈದ್ಯಾಧಿಕಾರಿಗಳಿಗೆ ತರಭೇತಿ ನೀಡಲಾಗಿದೆ. ಹಾಗೂ ಹೆಚ್ಚುವರಿ ಚಿಕಿತ್ಸೆಗೆ ತಕ್ಷಣವೇ ರವಾನಿಸಲು ವ್ಯವಸ್ಥೆ ಮಾಡಲಾಗಿದೆ.<br>5. ಸಣ್ಣ ಪುಟ್ಟ ಪ್ರಮಾಣದ ಎಲ್ಲಾ ಪ್ರಕರಣಗಳನ್ನು ಸಮೀಪದ ಆರೋಗ್ಯ ಸಂಸ್ಥೆಗಳಲ್ಲಿ ನಿರ್ವಹಿಸಲಾಗುತ್ತಿದೆ. ಹಾಗೂ ಇಂತಹ ಪ್ರಕರಣದ ಮಾಹಿತಿಯನ್ನು ನಿಗಧಿತ ನಮೂನೆಗಳಲ್ಲಿ ಜಿಲ್ಲೆಗಳಿಂದ ಪಡೆದು ಭಾರತ ಸರ್ಕಾರಕ್ಕೆ ವರದಿ ಮಾಡಲಾಗುತ್ತಿದೆ.<br>6. ಗಂಭೀರ ಪ್ರಕರಣಗಳಿದ್ದಲ್ಲಿ ಅಂತಹವರನ್ನು ಆಸ್ಪತ್ರೆಗಳಲ್ಲಿ ದಾಖಲಿಸಿ ಹೆಚ್ಚಿನ ಮಟ್ಟದ ಚಿಕಿತ್ಸೆ ನೀಡಲಾಗಿದೆ. ಇಂತಹ ಗಂಭೀರ ಪ್ರಕರಣಗಳನ್ನು Adverse events following immumization (AEFI) ಪ್ರೋಟೋಕಾಲ್‌ನಂತೆ ICMR ಹಾಗೂ ಭಾರತ ಸರ್ಕಾರಕ್ಕೆ ವರದಿ ಮಾಡಲಾಗುತ್ತಿದೆ. ಹಾಗೂ ದಾಖಲೆಗಳನ್ನು ಕೋವಿನ್ ಪೋರ್ಟಲ್‌ನಲ್ಲಿ ಇಂದೀಕರಿಸಲಾಗುತ್ತಿದೆ.. |

**ಆಕುಕ 02 ಎಸ್ ಎಂ ಎಂ 2021**

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು